ಈಗ ನೀವು ಏನು ತುರ್ತಾಗಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆವಿಗೂ ಕಾವೇರಿ ನೀರು ಬಂದಿದೆ, ಅಲ್ಲಿಂದ ಕೇವಲ 22 ಕಿ.ಮೀ. ಅಂತರದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಇದೆ. ಆ ಜಿಲ್ಲೆಗೆ ನೀರು ಕೊಡಬೇಕೆಂದು ಹೇಳಿದ್ದೀರಿ, ಇದನ್ನು ಸರ್ಕಾರ ಗಂಭೀರವಾಗಿ ಪರಿಶೀಲಿಸಿ, ಕಾವೇರಿ ನೀರು ನಮಗೇನು ಅವಾರ್ಡಗೆ ಅನುಕೂಲವಾಗಿ ಲಭ್ಯತೆಯಿದೆ, ಅದನ್ನು ಪರಿಶೀಲಿಸಿ, ಇದರ ಬಗ್ಗೆ ಅಗತ್ಯವಾದ ಕ್ರಮ ತೆಗೆದುಕೊಂಡು ಸ್ವಚ್ಚವಾದ ಕುಡಿಯುವ ನೀರು ಕೊಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಇ) ಗಮನ ಸೆಳೆಯುವ ಸೂಚನೆ

ವಿಷಯ :- ಬೀದರ್ ಜಿಲೆಯಲ್ಲಿ ವಿದ್ಯುತ್ ಶಾಖೋತ್ಪನ್ನ ಕೇಂದ್ರವನ್ನು ಸ್ಥಾಪಿಸುವುದರ ಬಗ್ಗೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್) :- ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ತೀವ್ರವಾದ ವಿದ್ಯುತ್ ಸಮಸ್ಯೆ ಇರುವುದರಿಂದ ಈ ಭಾಗದ ಜನರು ಮತ್ತು ರೈತರು ತೊಂದರೆಗೊಳಗಾಗಿದ್ದಾರೆ. ವಿದ್ಯುತ್ ಸಮಸ್ಯೆಯನ್ನು ಪರಿಹರಿಸಲು ಒಂದು ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವುದರ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :- (ಹೇಳಿಕೆಯ ಪ್ರತಿ ಲಗತ್ತಿಸಿದೆ)

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ ರವರು ನಿಯಮ 73 ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಇಂಧನ ಸಚಿವರ ಹೇಳಿಕೆ :-

ಬೀದರ್ ಜಿಲ್ಲೆ ಒಳಗೊಂಡಂತೆ ರಾಜ್ಯದಲ್ಲಿ ವಿದ್ಯುತ್ ಅಭಾವ ತೀವ್ರವಾಗಿದ್ದು ಈ ದಿಸೆಯಲ್ಲಿ ಗುಲ್ಬರ್ಗಾದಲ್ಲಿ (ಫರತಾಬಾದ್) 1320 ಮೆಗಾ ವ್ಯಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಯೋಜನೆಗೆ ದಿನಾಂಕ : 7-10-2008 ರಂದು ಸರ್ಕಾರದ ಅನುಮೋದನೆ ನೀಡಲಾಗಿದೆ. ಈ ಯೋಜನೆಗಾಗಿ ಭೂ ಸ್ವಾಧೀನ ಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಗುಲ್ಬರ್ಗಾ ಜಿಲ್ಲೆ ಇವರಿಗೆ ಭೂಸ್ವಾಧೀನ ಕಾಯ್ದೆ

ಕಲಂ 17(1) ಮತ್ತು 17(4) ರ ಅಡಿಯಲ್ಲಿ ಕಂದಾಯ ಇಲಾಖೆಯು ಸಂಖ್ಯೆ : ಆರ್‌ಡಿ 98 ಭೂಸ್ವಾಗು 2008 ದಿನಾಂಕ : 1-1-2009 ರಂದು ಆದೇಶವನ್ನು ಹೊರಡಿಸಿದೆ. ಇದಲ್ಲದೇ ಭೂ ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ರೂ.10.00 ಕೋಟಿಗಳನ್ನು ಈ ಯೋಜನೆಗಾಗಿ ಸರ್ಕಾರಿ ಆದೇಶ ಸಂಖ್ಯೆ : ಇಎನ್ 126 ಪಿಪಿಸಿ 2008 ದಿನಾಂಕ: 12-1-2009 ರಂದು ಹಣವನ್ನು ಬಿಡುಗಡೆ ಮಾಡಿದೆ.

ಬಿಜಾಪುರ ಜಿಲ್ಲೆಯ ಕುಡಿಗಿಯಲ್ಲಿ 4000 ಮೆಗಾ ವ್ಯಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ಥರ್ಮಲ್ ಯೋಜನೆಗೆ ದಿನಾಂಕ : 16-10-2008 ರಂದು ಸರ್ಕಾರದ ಅನುಮೋದನೆ ನೀಡಲಾಗಿದೆ. ಕರ್ನಾಟಕ ಸರ್ಕಾರ, ಎನ್.ಟಿ.ಪಿ.ಸಿ ಮತ್ತು ಪಿ.ಸಿ.ಕೆ.ಎಲ್. ಸದರಿ ಯೋಜನೆಯನ್ನು ಅನುಷ್ಠಾನ ಮಾಡಲು ದಿನಾಂಕ : 12-1-2009 ರಂದು ಎಂ.ಒ.ಯು ಗೆ ಸಹಿಯನ್ನು ಹಾಕಲಾಗಿದೆ. ಎನ್.ಟಿ.ಪಿ.ಸಿ.ಯು ಈ ಯೋಜನೆಯನ್ನು ಅನುಷ್ಠಾನ ಮಾಡುತ್ತದೆ.

800 ಮೆಗಾ ವ್ಯಾಟ್ ಸಾಮರ್ಥ್ಯದ ಯದ್ಲಾಪುರ ಶಾಖೋತ್ಪನ್ನ ವಿದ್ಯುತ್ ಯೋಜನೆ, 1600 (2 X 800) ಮೆಗಾ ವ್ಯಾಟ್ ಯರಮರಸ್ ಶಾಖೋತ್ಪನ್ನ ವಿದ್ಯುತ್ ಯೋಜನೆ ಹಾಗೂ 500 ಮೆಗಾ ವ್ಯಾಟ್ ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 3ನೇ ಘಟಕವನ್ನು 11ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಪ್ರಾರಂಭಿಸಲು ಅನುಮೋದನೆ ನೀಡಿದೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಯದ್ಲಾಪುರ ಮತ್ತು ಯರಮರಸ್ ವಿದ್ಯುತ್ ಯೋಜನೆಗಳನ್ನು ಬಿ.ಹೆಚ್.ಇ.ಎಲ್ ನ ಜಂಟಿ ಸಹಭಾಗಿತ್ವದಲ್ಲಿ ಅನುಷ್ಠಾನಕ್ಕೆ ತರಲು ದಿನಾಂಕ : 12-01-2009 ರಂದು ಎಂ.ಒ.ಯು ಗೆ ಸಹಿ ಹಾಕಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಮೆ: ರಿಲಾಯನ್ಸ್ ಇಂಡಸ್ಟ್ರೀಸ್ ಮುಖಾಂತರ ಅನಿಲ ಆಧಾರಿತ (Gas based) ಶಾಖೋತ್ಪನ್ನ ಯೋಜನೆಯನ್ನು ಸ್ಥಾಪಿಸಲು ಯೋಜಿಸಿದ್ದಾರೆ. ಆದರೆ, ಮೆ: ರಿಲಾಯನ್ಸ್ ಇಂಡಸ್ಟ್ರೀಸ್ ಅನಿಲ ಸರಬರಾಜಿನ ಸಮಸ್ಯೆಯನ್ನು ಎದುರಿಸುತ್ತಿರುವ ಕಾರಣ ಈ ಪ್ರಸ್ತಾವನೆಯು ಸದ್ಯಕ್ಕೆ ಸ್ಥಗಿತಗೊಂಡಿದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್) :- ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುತ್ ಸಚಿವರು ಬಹಳ ಚೆನ್ನಾಗಿ ಹೇಳಿದಿರಿ. ಬಿಜಾಪುರ, ಯಲ್ಲಾಪುರ, ಗುಲ್ಬರ್ಗಾ, ಈ ಭಾಗದಲ್ಲಿ ಮಾಡಿದ್ದೇವೆಂದು ಹೇಳಿದಿರಿ. ಬೀದರ್‌ನಲ್ಲಿ ಜನರು ಇರುತ್ತಾರೋ ಇಲ್ಲವೋ ಅಲ್ಲಿ ಏಕೆ ಬೇಕು ಎನ್ನುವ ಮಾತು ಇದರಲ್ಲಿ ಬಂದಿದೆ.

ದಯವಿಟ್ಟು ಬೀದರ್‌ನಲ್ಲಿ ಎಷ್ಟು ಕಷ್ಟ ಇದೆ ಎಂಬುದನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ಬೀದರ್‌ನಲ್ಲಿ No industries district ಎಂದು declare ಆಗಿದೆ. ಇಂಡಸ್ಟ್ರೀಸ್‌ಗಳೆಲ್ಲವೂ ನಿಂತು ಹೋಗಿವೆ. ರೈತರಿಗೂ ವಿದ್ಯುತ್ ಸಿಗುತ್ತಿಲ್ಲ. ಹಳ್ಳಿಯಲ್ಲಿ ಮೂರು ಮೂರು ದಿವಸ ವಿದ್ಯುತ್ ಸಿಗುತ್ತಿಲ್ಲ. ಇಷ್ಟೊಂದು ಪರಿಸ್ಥಿತಿ ಕೆಟ್ಟು ಹೋಗಿದೆ. ಇಲ್ಲಿ ಒಂದು ಮಾಡಿ ಎಂದು ನಾವು ಕೇಳಿದರೆ, ನೀವು ಅಲ್ಲಿ ರಿಲಾಯನ್ಸ್ ಇಂಡಸ್ಟ್ರೀಸ್ ಇದೆ ಎಂದು ಹೇಳುತ್ತೀರಿ. ಆದರೆ, ಇದು ನಿಂತು ಹೋಗಿ ಬಹಳ ದಿವಸವಾಯಿತು ಅದು ಬರುವುದೂ ಇಲ್ಲ. ಅದಕ್ಕೆ ತಾವು ಒಂದು ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರೆ ನಮಗೆ ಸಮಾಧಾನವಾಗುತ್ತದೆ. ಏಕೆಂದರೆ, ನೀವು ಬೇರೆ ಜಿಲ್ಲೆಗಳಲ್ಲಿ ಮಾಡಿದಿರಿ ಇದಕ್ಕಾಗಿ ನಮಗೆ ಬಹಳ ಸಂತೋಷವಾಗಿದೆ. ಅದಕ್ಕೆ ನಾವು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮಲ್ಲೂ ಒಂದು ಮಾಡಿ. ಹಿಂದೆ ಒಂದು ಸಾರಿ ನಮ್ಮಲ್ಲಿ ಸ್ಯಾಂಕ್ಷನ್ ಆಗಿತ್ತು. ನಾನು ಮಂತ್ರಿಯಿದ್ದಾಗ ಸ್ಯಾಂಕ್ಷನ್ ಮಾಡಿ, ಮಂಜೂರು ಮಾಡಿದೆ. ನಂತರ ಬೇರೆ ಸರ್ಕಾರ ಬಂತು, ಅದು ಅಲ್ಲಿಗೆ ನಿಂತು ಹೋಯಿತು. ಅದಕ್ಕೆ ತಾವು ನಮ್ಮಲ್ಲಿ ಒಂದು ಮಾಡಿಕೊಡುತ್ತೇವೆ ಎನ್ನುವ ಉತ್ತರ ಹೇಳಿದರೆ ಸಾಕು. ನನಗೆ ಬೇರೆ ಏನೂ ಬೇಕಾಗಿಲ್ಲ. ಬೇರೆ ಜಿಲ್ಲೆಗಳಲ್ಲಿ ಮಾಡಿದ್ದೀರಿ, ಎಲ್ಲಾ ಚೆನ್ನಾಗಿ ಮಾಡುತ್ತಿದ್ದೀರಿ ಮಾಡಿ. ವಿದ್ಯುತ್ ಅಭಾವ ಬಹಳ ಭಯಂಕರವಿದೆ. ಇಡೀ ಕರ್ನಾಟಕ ರಾಜ್ಯದಲ್ಲಿಯೇ ತೊಂದರೆಯಿದೆ. ಅದರಲ್ಲಿ ಕೆಲವು ಷುಗರ್ ಫ್ಯಾಕ್ಟರಿಯವರು ಜಾಸ್ತಿ ದುಡ್ಡು 6-00 ರೂಪಾಯಿ ಕೊಡುತ್ತಿದ್ದಾರೆ ಎಂದು ಹೇಳಿದಿರಿ, 7-00 ರೂಪಾಯಿ ರಿಲಾಯನ್ಸ್‌ದವರು ಕೊಡುತ್ತಿದ್ದಾರೆ. ಅವರು ಏಕೆ 7-00 ರೂಪಾಯಿ ಕೊಡಬಾರದು? ಈ ಎಲ್ಲಾ ತೊಂದರೆಯು ಇದೆ. ಅದಕ್ಕೆ ಇದನ್ನು ಇನ್ನು ಹೆಚ್ಚು ಮಾಡಬೇಕು. ಷುಗರ್ ಫ್ಯಾಕ್ಟರಿಗೆ 10, 12, ರೂಪಾಯಿಗಳವರೆಗೆ ಮಾಡಬಹುದು. ಅದಕ್ಕೆ ನೀವು ಸೌಲಭ್ಯಗಳನ್ನು ಕೊಟ್ಟರೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಮಾಡುವುದರ ಜೊತೆಗೆಇಲ್ಲಿ ಒಂದು ಥರ್ಮಲ್ ಪ್ಲಾಂಟ್ ಹಾಕುತ್ತೇವೆ ಎನ್ನುವ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :- ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರ ಕಳಕಳಿ ನನಗೆ ಅರ್ಥವಾಗುತ್ತಿದೆ. ನಾನು ಅವರೊಡನೆ ವಿಶೇಷವಾದ ಮೀಟಿಂಗ್ ಮಾಡುತ್ತೇನೆ. ಆ ಮೀಟಿಂಗ್‌ಗೆ ನಮ್ಮ ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ ಬೀದರ್ ಜಿಲ್ಲೆಯಲ್ಲಿ ಅವಕಾಶವಾದರೆ ನಾನು ಖಂಡಿತವಾಗಿ ಮಾಡಿ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರಲ್ಲಿ ಒಂದು clarification ಕೇಳುತ್ತೇನೆ. ಈಗ ತಮ್ಮ ಗುರಿ ಇರುವಂಥಾದ್ದು 5,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ತಮ್ಮ ಅಧಿಕಾರದ ಅವಧಿಯಲ್ಲಿ ಮಾಡೇ ಮಾಡುತ್ತೇವೆಂಬ ಮಾತನ್ನು ತಾವು ಹೇಳಿದ್ದೀರಿ. ಈಗಾಗಲೇ 4,800 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ Memorandum ಅನ್ನು ಮಾಡಿದ್ದೀರಿ. ಅದು implement ಆಗಬೇಕೆಂದರೆ, it takes time. ಈ ಬಗ್ಗೆ ನಾನು ಒಂದು ಸಲಹೆ ಸೂಚನೆಯನ್ನು ಕೊಡಲಿಚ್ಛಿಸುತ್ತೇನೆ. ನಿಮಗೆ ಥರ್ಮಲ್ ಆಧರಿತವಾದಂಥ ಶಾಖೋತ್ಪನ್ನಗಳನ್ನು ಮಾಡುವುದರಿಂದ, ಅದು ಮುಂದೊಂದು ದಿವಸ ಕಷ್ಟವಾಗಬಹುದು. ನೀವು ultimate ಆಗಿ local ಆಗಿ ನಮ್ಮಲ್ಲಿ ಕಲ್ಲಿದ್ದಲು ಸಿಗದೇ ಇರುವುದರಿಂದ, ಅದನ್ನು ನೀವು ಹೊರದೇಶದಿಂದ ತರಬೇಕಾದಂಥ ಅನಿವಾರ್ಯ ಪರಿಸ್ಥಿತಿಯಾಗಿ, ಎಷ್ಟೊ ಸಾರಿ ಈಗ ಇರತಕ್ಕಂಥ ಥರ್ಮಲ್‌ಗಳು ಇವತ್ತು ನಿಂತು ಹೋಗಿರುವಂಥ ಪರಿಸ್ಥಿತಿಯಾಗಿದೆ. ಹಾಗಾಗಿ ಇದಕ್ಕೆ ಒಂದು ಶಾಶ್ವತವಾದ ವ್ಯವಸ್ಥೆಯೆಂದರೆ, ನಮಗೆ ಏನು shortfall ಇದೆ, ತಾವು shortfall ಬಗ್ಗೆ ಹೇಳುತ್ತಿದ್ದೀರಿ. ಅದು ಬರೀ 1,700-1,800 ಅಲ್ಲ, ನಿಮ್ಮ install capacityಗೆ ನೀವು ಲೆಕ್ಕ ಹಾಕಿಕೊಂಡರೆ ನಮ್ಮ ಕೊರತೆ ಇವತ್ತು 4,000 ಮೆಗಾವ್ಯಾಟ್‌ನಿಂದ 5,000 ಮೆಗಾವ್ಯಾಟ್ ಬರುತ್ತದೆ. ಹಾಗಾಗಿ ಅದಕ್ಕೆ ಏನು ಮಾಡಬೇಕೆಂದರೆ ನ್ಯೂಕ್ಲಿಯರ್ ಬಗ್ಗೆ ತಮಗೂ ಈಗಾಗಲೇ ಗೊತ್ತಿದೆ. ಈ ಬಗ್ಗೆ ಸಾಕಷ್ಟು ಅವಕಾಶಗಳು ಆಗುತ್ತಿವೆ. ಈಗಾಗಲೇ ಬೇರೆ ಬೇರೆ ದೇಶಗಳೊಂದಿಗೆ agreements ಎಲ್ಲಾ ಆಗುತ್ತಿದೆ. ಇದರ ಕಡೆಗೆ ಏನಾದರೂ ಗಮನ ಕೊಡತಕ್ಕಂಥ ಚಿಂತನೆ ಇದೆಯಾ? ತಾವು ಏನಾದರೂ ಮಾಡಿ ಶಾಶ್ವತವಾಗಿ ಕರ್ನಾಟಕ ರಾಜ್ಯವನ್ನು ಕಗ್ಗತ್ತಲೆಯಿಂದ ಹೊರ ತರಬೇಕು, ಇವತ್ತು ಬೆಳಕನ್ನು ಕೊಡಬೇಕೆಂಬ ಸದಿಚ್ಛೆ ನಿಮಗಿದ್ದರೆ, ಅದನ್ನು ಆದಷ್ಟು ಬೇಗ ಅದನ್ನು ಮಾಡಬೇಕೆಂದರೆ Nuclear power is the only means. ದಯಮಾಡಿ ಅದರ ಬಗ್ಗೆ ಏನಾದರೂ ಚಿಂತನೆ ಮಾಡಿದ್ದೀರಾ?

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು :- ಇದು ಗಮನ ಸೆಳೆಯುವ ಸೂಚನೆ, ಇದಕ್ಕೆ ತಾವು ಸಹಿ ಮಾಡಿಲ್ಲ. ಮಾನ್ಯ ಮಂತ್ರಿಯವರು ಉತ್ತರ ಕೊಡಲಿ, ಈ ವಿಷಯವನ್ನು ಮುಗಿಸೋಣ. ಮಾನ್ಯ ಮಂತ್ರಿಯವರೆ, ತಾವು ಉತ್ತರ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ಕೆಲವು ವಿಷಯಗಳು important ಇದ್ದಾಗ ಸಹಿ ಹಾಕದೇ ಇದ್ದರೂ ತಾವು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷರು :- ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಎಲ್ಲಾ ವಿಚಾರಗಳನ್ನು ಹೇಳಬಹುದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ಹೇಳಬಹುದು. ನಾನು ಹೇಳುವಂಥಾದ್ದು ಇವತ್ತು ರಾಜ್ಯ ಕಗ್ಗತ್ತಲಿನಲ್ಲಿದೆ.

ಉಪಾಧ್ಯಕ್ಷರು :- ಮಾನ್ಯ ಸದಸ್ಯರು ಬೀದರ್ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಮಂತ್ರಿಯವರು ಅದಕ್ಕೆ ಉತ್ತರವನ್ನು ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :- ಮಾನ್ಯ ಉಪಾಧ್ಯಕ್ಷರೆ, ಇವತ್ತು ರಾಜ್ಯ ಕಗ್ಗತ್ತಲಿನಲ್ಲಿದೆ. ಮಾನ್ಯ ಈಶ್ವರಪ್ಪನವರು ಅದರ ಬಗ್ಗೆ ಕಾಳಜಿಯನ್ನು ತೆಗೆದುಕೊಳ್ಳಬೇಕು. ತಾವು ದಯಮಾಡಿ ಮುಂದಿನ ಅಧಿವೇಶನದಲ್ಲಿ ಆದರೂ ಈ ವಿಷಯಕ್ಕೆ ಎರಡು ದಿವಸಗಳ ಕಾಲ ಚರ್ಚೆ ಮಾಡುವುದಕ್ಕೆ ಅದು ಮೇಲ್ಮನೆಯಲ್ಲಿ ಇರಬಹುದು, ಕೆಳಮನೆಯಲ್ಲಿ ಇರಬಹುದು, ಪಕ್ಷಾತೀತವಾಗಿ ಚರ್ಚೆಯಾಗಬೇಕು. ಇದರಲ್ಲಿ ರಾಜಕೀಯ ಮಾಡುವುದು ಬೇಡ. ಮುಂದಿನ ಹತ್ತಾರು ವರ್ಷಗಳಿಗೆ ಏನು ಮಾಡಬೇಕೆಂಬ ಬಗ್ಗೆ ಚಿಂತನೆ ಮಾಡುವುದಕ್ಕೆ, ಈಗಾಗಲೇ ನಾನೇ ಇಂಧನ ಸಚಿವನಾಗಿದ್ದಂಥ ಕಾಲದಲ್ಲಿ KPTCL ಮತ್ತು ನಾವು 20-20 ಎಂದು vision ಮಾಡಿದ್ದೇವೆ. ನಾವು ಏನು ಮಾಡಬೇಕೆಂಬ ಬಗ್ಗೆ ಎಲ್ಲಾ ಮಾಹಿತಿ ಇದೆ. ಅದಕ್ಕೆ ತಾವು ದಯಮಾಡಿ ಮುಂದಿನ ಸದನದಲ್ಲಿ ಎರಡು ದಿವಸಗಳು ಈ ವಿಷಯದ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು. ಅದರಲ್ಲಿ ಪಕ್ಷಾತೀತವಾಗಿ ಒಂದು ನಿರ್ಣಯವನ್ನು ಮಾಡಿ. ಇಲ್ಲಿ ಯಾವ್ಯಾವುದಕ್ಕೆ ಕಡಿವಾಣವನ್ನು ಹಾಕಬೇಕೊ, ಅದಕ್ಕೆ ಕಡಿವಾಣವನ್ನು ಹಾಕಿ. ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ದಯಮಾಡಿ ಮುಂದಿನ ಪೀಳಿಗೆಯ ದೃಷ್ಟಿಯಿಂದ ಇದಕ್ಕೆ ಒಂದು ಅವಕಾಶವನ್ನು ಮಾಡಬೇಕೆಂದು ಮಾನ್ಯ ಇಂಧನ ಸಚಿವರಲ್ಲಿ ನಾನು ಮನವಿಯನ್ನು ಮಾಡುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು :- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ವಿದ್ಯುಚ್ಛಕ್ತಿ ವಿಚಾರವಾಗಿ ಮಾನ್ಯ ಮಂತ್ರಿಯವರ ಗಮನವನ್ನು ಸೆಳೆದಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಯವರ ಗಮನಕ್ಕೆ ತರಬಯಸುವುದೇನೆಂದರೆ, ನಮ್ಮದು ನೀರಾವರಿ ಪ್ರದೇಶವಾಗಿದ್ದು, ಅಲ್ಲಿ ವಿದ್ಯುಚ್ಛಕ್ತಿ ಮೇಲಿಂದ ಮೇಲೆ ಹೋಗುತ್ತಿದೆ. ಎಲ್ಲಾ ಜಿಲ್ಲೆಗಳಲ್ಲೂ ಜನರಿಗೆ ತೊಂದರೆಯಾಗುತ್ತಿದೆ. ಅದಕ್ಕೋಸ್ಕರ ವಿದ್ಯುಚ್ಛಕ್ತಿಗೆ ಥರ್ಮಲ್ ವಿದ್ಯುತ್ ಘಟಕವನ್ನು ಮಾಡುವುದಕ್ಕೆ ಏನಾದರೂ ಸಾಧ್ಯತೆ ಇದೆಯೇ? ಇಲ್ಲವೆಂದರೆ ರಿಲಯನ್ಸ್ ಕಂಪನಿಯವರು ಬೀದರ್ ಜಿಲ್ಲೆಗೆ ವಿದ್ಯುತ್ ಅನ್ನು ಕೊಡುವುದಕ್ಕೆ ತಯಾರಿದ್ದಾರೆ. ಆ ಪ್ರಸ್ತಾವನೆ ಸರ್ಕಾರದ ಮುಂದಿದೆ. ಈ ಕಂಪನಿಯವರು ಮುಂದೆ ಬಂದಿದ್ದಾರೆ. ಅವರು ವಿದ್ಯುಚ್ಛಕ್ತಿಯನ್ನು 12 ಗಂಟೆಗಳ ಕಾಲ ಬೀದರ್ ಜಿಲ್ಲೆಗೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇದನ್ನು private sectorನಲ್ಲಿ ಮಾಡುವುದಕ್ಕೆ ಆಗುತ್ತದೆಯೋ, ಹೇಗೆ? ಈ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :- ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ರೇವಣ್ಣನವರು ಹೇಳಿದಂಥ ವಿಷಯವನ್ನು ನಾನು ಖಂಡಿತವಾಗಿ ಸ್ವಾಗತ ಮಾಡುತ್ತೇನೆ, ಏಕೆಂದರೆ ನಾನು ಕೂಡ ಈ ಇಲಾಖೆಗೆ ಹೊಸದಾಗಿ ಮಂತ್ರಿಯಾಗಿರುವಂಥ ಸಂದರ್ಭದಲ್ಲಿ ಎಲ್ಲಾ ಹಿರಿಯರು ಹಿಂದಿನ ಸಚಿವರುಗಳೊಂದಿಗೆ ವಿಧಾನ ಸಭೆಯಲ್ಲಿ ಚರ್ಚೆಯಾಗಬೇಕು. ಈ ಚರ್ಚೆಯಲ್ಲಿ ಮಾರ್ಗದರ್ಶನವನ್ನು ಮಾಡಿದರೆ ಖಂಡಿತವಾಗಿ ಅದನ್ನು ಸ್ವೀಕಾರ ಮಾಡಿ, ರಾಜ್ಯದ ವಿದ್ಯುತ್ ಅಭಾವವನ್ನು ಖಂಡಿತವಾಗಿ ಪರಿಹಾರ ಮಾಡುವ ಬಗ್ಗೆ ಪ್ರಯತ್ನವನ್ನು ಮಾಡುತ್ತೇನೆಂಬ ಮಾತನ್ನು ಹೇಳುತ್ತೇನೆ. ಇನ್ನು ವಿರೋಧಪಕ್ಷದ ಉಪ ನಾಯಕರಾದ ಶ್ರೀ ಜಯಚಂದ್ರರವರು ಹೇಳಿದ ಹಾಗೆ ನ್ಯೂಕ್ಲಿಯರ್ ಇರಬಹುದು, ಅಸಂಪ್ರದಾಯಕ ಇಂಧನ ಕೇಂದ್ರಗಳಿರಬಹುದು, ಹೈಡಲ್ ಇರಬಹುದು, ಥರ್ಮಲ್ ಇರಬಹುದು. ಯಾವ್ಯಾವ ರೂಪದಲ್ಲಿ ಕರ್ನಾಟಕ ರಾಜ್ಯಕ್ಕೆ ವಿದ್ಯುತ್ ಉತ್ಪಾದನೆಯನ್ನು ಮಾಡುವುದಕ್ಕೆ ಸಾಧ್ಯವಿದೆಯೋ, ಆ ಎಲ್ಲಾ ದಿಕ್ಕಿನಲ್ಲೂ ನಾವು ಪ್ರಯತ್ನವನ್ನು ನಡೆಸುತ್ತಿದ್ದೇವೆ. ತಮ್ಮ ಗಮನಕ್ಕೆ ಈ ವಿಚಾರವನ್ನು ತರಬಯಸುತ್ತೇನೆ. ಇನ್ನು ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಹಾಗೂ ಬಸವರಾಜ ಪಾಟೀಲ್ ಅಟ್ಟೂರುರವರು ಹೇಳಿದ ಹಾಗೆ ಆ ಜಿಲ್ಲೆಯ ಎಲ್ಲಾ ಶಾಸಕರುಗಳನ್ನು ಕರೆದು ಯಾವ್ಯಾವ

ರೂಪದಲ್ಲಿ ವಿದ್ಯುತ್ ಅನ್ನು ತರುವುದಕ್ಕೆ ಸಾಧ್ಯವಿದೆಯೋ, ಅದಕ್ಕೆ ನಾನು ಖಂಡಿತ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಜನಪ್ರತಿನಿಧಿಗಳು ವಿದ್ಯುತ್ ಮಾಡಿ ಕೊಡುವುದಕ್ಕೆ ಆಗುತ್ತದೆಯೇ? ಈ ಬಗ್ಗೆ ಸರ್ಕಾರ ನೀವು ಮಾಡುತ್ತೇವೆಂದು ಹೇಳಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ :- ನಾನು ಮಾಡುತ್ತೇನೆಂದು ಹೇಳಿದೆ, ಅವರ ಸಲಹೆಯನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದೆ.

ಶ್ರೀ ಟಿ.ಬಿ. ಜಯಚಂದ್ರ :- ನೀವು ಜನ ಪ್ರತಿನಿಧಿಗಳ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಒಳ್ಳೆಯದೇ, ಅದನ್ನು ಮಾಡಿ. ಅದರೆ ಇದನ್ನು ಯಾವ್ಯಾವ ಮೂಲಗಳಿಂದ ಮಾಡುವುದಕ್ಕೆ ಎಲ್ಲಿ ಸಾಧ್ಯವಿದೆಯೆಂಬ ಬಗ್ಗೆ technical reports ಅನ್ನು, ಈಗ ನೀವು ಭತ್ತೀಸ್‌ಗಡಕ್ಕೆ ಕಾಲಿಟ್ಟಿದ್ದೀರಿ. ನಾನು ಹೇಳುವಂಥಾದ್ದು ಏನೆಂದರೆ ತಾವು ಭತ್ತೀಸ್‌ಗಡಕ್ಕೆ ಕಾಲಿಡುವುದಕ್ಕೆ ಮೊದಲು ಕರ್ನಾಟಕದಲ್ಲಿ ಯಾವುದೇ avenue ಸಿಗಲಿಲ್ಲವೇ ಮತ್ತೆ ಯಾವುದೇ methods ಇರಲಿಲ್ಲವೇ? ಅದಕ್ಕೆ ಏನಾದರೂ ದುಡ್ಡು ಇದೆಯೇ? ಅದರ ಬಗ್ಗೆ ನಾನು ಹೇಳುತ್ತಿರುವಂಥದ್ದು. ನಾನು ಕೇಳುತ್ತಿರುವಂಥದ್ದಕ್ಕೆ ತಾವು ಉತ್ತರವನ್ನು ಕೊಡುತ್ತೀರೆಂದು ನಾನು ಭಾವಿಸಿದ್ದೆ. ಇಲ್ಲಿ ನ್ಯೂಕ್ಲಿಯರ್ ಒಂದು ಕಡೆ, ಇನ್ನು ಏನೇನು avenues ಅನ್ನು, ಏನೇನು projects ಮಾಡಿದ್ದೀರಿ, ಎಲ್ಲೆಲ್ಲಿ identify ಮಾಡಿದ್ದೀರಿ. ಅದನ್ನು ತಾವು ನಮ್ಮ ಮುಂದಿಟ್ಟರೆ ನಾವು react ಮಾಡಬಹುದು. ಅದನ್ನು ಇಲ್ಲಿ ಸಭೆಯಲ್ಲಿಡದೇ ಇಲ್ಲದೇ ನಾವು ಚರ್ಚೆ ಮಾಡಿದರೆ ಏನು ಪ್ರಯೋಜನ?

ಶ್ರೀ ಕೆ.ಎಸ್. ಈಶ್ವರಪ್ಪ :- ಮಾನ್ಯ ಉಪಾಧ್ಯಕ್ಷರೆ, ನಾನು Calling Attention ಏನು ಇದೆ. ಅದಕ್ಕೆ ನಾನು readyಯಾಗಿ ಬಂದಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ :- ತಾವು ರಾಜ್ಯದ ಮಂತ್ರಿಗಳಾಗಿದ್ದೀರಿ. ಕರ್ನಾಟಕ ರಾಜ್ಯ ಕಗ್ಗತ್ತಲಲ್ಲಿದೆ.

ಶ್ರೀ ಕೆ.ಎಸ್. ಈಶ್ವರಪ್ಪ :- ನಾನು ಇಲ್ಲವೆಂದು ಹೇಳುವುದಿಲ್ಲ. ಅದಕ್ಕೋಸ್ಕರವೇ ವಿದ್ಯುತ್ ಇಲಾಖೆಯ ಬಗ್ಗೆ ಏನೇನು ಬೇಕೋ ಅದೆಲ್ಲಕ್ಕೂ ನಾನು ಉತ್ತರವನ್ನು ಕೊಡುವುದಕ್ಕೆ ನಾನು ತಯಾರಿದ್ದೇನೆ. ನಿಮ್ಮ ಸಲಹೆಗಳನ್ನು ಕೊಡಿಯೆಂದು

ನಾನು ಕೇಳಿದ್ದೇನೆ. ನೀವು ಏನು ಹೇಳುತ್ತಿರೋ, ಅದನ್ನು ಕೇಳಿ, ಅದಕ್ಕೆ ಉತ್ತರವನ್ನು ಕೊಡುವುದಕ್ಕೂ ನಾನು ತಯಾರಿದ್ದೇನೆ.

ಉಪಾಧ್ಯಕ್ಷರು :- ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡರವರೆ, ಕೇಳಿ.

ಈ) ವಿಷಯ: ಶ್ರೀರಂಗಪಟ್ಟಣ ತಾಲ್ಲೂಕು ಕೆ.ಆರ್.ಸಾಗರ, ಬೆಳಗೊಳ ಗ್ರಾಮದ ಪದವಿಪೂರ್ವ ಕಾಲೇಜಿನ ಕಟ್ಟಡ ನಿರ್ಮಾಣ ಹಾಗೂ ನೂತನ ಪ್ರಥಮ ಕಾಲೇಜು ಸ್ಥಾಪನೆ ಬಗ್ಗೆ.

ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) :- ಮಾನ್ಯ ಉಪಾಧ್ಯಕ್ಷರೆ, ...

(ಮಾನ್ಯ ಮಂತ್ರಿಯವರು ಸಭೆಯಲ್ಲಿ ಓದಿದ ಹೇಳಿಕೆಯನ್ನು ಲಗತ್ತಿಸಿದೆ)

ವಿಧಾನ ಸಭಾ ಸದಸ್ಯರಾದ ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಇವರ ನಿಯಮ 73ರ ಅಡಿಯಲ್ಲಿ ಗಮನ ಸೆಳೆಯುವ ಪ್ರಶ್ನೆಗೆ ಉತ್ತರ :

ವಿಷಯ :- ಶ್ರೀರಂಗಪಟ್ಟಣ ತಾಲ್ಲೂಕು ಕೆ ಆರ್ ಸಾಗರ, ಬೆಳಗೊಳ ಗ್ರಾಮದ ಪದವಿಪೂರ್ವ ಕಾಲೇಜುಗಳ ಕಟ್ಟಡ ನಿರ್ಮಾಣ ಅಪೂರ್ಣಗೊಂಡಿದ್ದು, ಕಾಮಗಾರಿ ಪೂರ್ಣಗೊಳಿಸಲು ಅಗತ್ಯವಾದ ಅನುದಾನ ಹಾಗೂ ಕೆ ಆರ್ ಸಾಗರದಲ್ಲಿ ನೂತನ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಗೆ ಅನುದಾನ ಬಿಡುಗಡೆ ಮಾಡುವುದರ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಉತ್ತರ :-

ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆ ಆರ್ ಸಾಗರ, ಇಲ್ಲಿಗೆ ಆರ್.ಐ.ಡಿ.ಎಫ್-12ರ ಯೋಜನೆಯಡಿಯಲ್ಲಿ ರೂ.09.80 ಲಕ್ಷಗಳ ವೆಚ್ಚದಲ್ಲಿ 02 ಕೊಠಡಿಗಳು, ಹಾಗೂ ಅಪೆಂಡಿಕ್ಸ್-ಇ ಯೋಜನೆಯಲ್ಲಿ 15.00 ಲಕ್ಷಗಳು ಮಂಜೂರು ಮಾಡಲಾಗಿದೆ. ಆರ್.ಐ.ಡಿ.ಎಫ್-12ರ ಕಾಮಗಾರಿ ಪ್ರಗತಿಯಲ್ಲಿದ್ದು ಈ ಕಾಮಗಾರಿಗೆ 7.94 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಅಪೆಂಡಿಕ್ಸ್-ಇ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯು ನಿರ್ವಹಿಸುತ್ತಿದ್ದು ಸದರಿ ಇಲಾಖೆಯ ದಕ್ಷಿಣ ವಲಯದ ಮುಖ್ಯ ಅಭಿಯಂತರರಿಗೆ ದಿನಾಂಕ : 01-10-2008 ರಂದು ರೂ.5 ಕೋಟಿಗಳನ್ನು ಹಾಗೂ ದಿನಾಂಕ : 13-01-2009 ರಂದು ರೂ.2.50